## ಕರ್ನಾಟಕ ವಿಧಾನ ಪರಿಷತ್ತು

## ಶೂನ್ಯವೇಳೆ

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ರವರು ಶೂನ್ಯ ವೇಳೆಯಲ್ಲಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸತ್ತವರಿಗೂ ಡಯಾಲಿಸಿಸ್ ಸೌಲಭ್ಯ ಕಲ್ಪಿಸುತ್ತಿರುವ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಅವ್ಯವಸ್ಥೆ ಭ್ರಷ್ಟಾಚಾರ ಮತ್ತು ಜನರಿಂದ ಹಣ ಸುಲಿಗೆ ವಿಚಾರ ಕುರಿತು "ಸರ್ಕಾರಿ ಆಸ್ಪತ್ರೆ ಸ್ಪೆಷಲ್ ಸ್ಕೀಮ್ ಸ್ವರ್ಗಸ್ಥರಿಗೂ ಡಯಾಲಿಸಿಸ್" ಎಂಬ ಶೀರ್ಷಿಕೆಯಡಿ "ನಂಸಮಾಚಾರ" ಎಂಬ ಕನ್ನಡ ದಿನಪತ್ರಿಕೆಯಲ್ಲಿ ಇತ್ತೀಚೆಗೆ ವರದಿ ಪ್ರಕಟವಾಗಿರುತ್ತದೆ.

ಬಾಗಲಕೋಟೆಯ ಪಾಟೀಲ್ ಮೆಡಿಕಲ್ ಕೆ.ಆರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೀತಾಬಾಯಿ ಶೇಖಪ್ಪ ರಾಥೋಡ್ ಎಂಬ ಮಹಿಳೆ ನಿಧನ ಹೊಂದಿದ ನಂತರ, ಅವರ ಸಾವಿಗೆ ಸಂಬಂಧಿಸಿದ ಡೆತ್ ಸರ್ಟಿಫಿಕೇಟ್ ಸಹ ಆಸ್ಪತ್ರೆಯವರು ನೀಡಿದ್ದಾರೆ. ಆದರೆ, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ದಾಖಲೆಗಳಲ್ಲಿ ಅವರು ಸಾವಿನ ನಂತರವೂ ಹಲವಾರು ಬಾರಿ ಡಯಾಲಿಸಿಸ್ ಚಿಕಿತ್ಸೆ ಪಡೆದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಆಘಾತಕಾರಿ ವಿಷಯವೆಂದರೆ, ಈ ನಕಲಿ ದಾಖಲೆಗಳಿಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳೇ ಸಹಿ ಹಾಕಿದ್ದಾರೆ.

ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಇಂತಹ ನಕಲಿ ಬಿಲ್‌ಗಳು ತಯಾರಾಗುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿದೆ. ಡಯಾಲಿಸಿಸ್ ಯಂತ್ರಗಳ ಟೆಂಡರ್‌ಗಳನ್ನು ಪಡೆದಿರುವ ಏಜೆನ್ಸಿಗಳ ಮೇಲೆ ಸಮರ್ಪಕ ಮೇಲ್ವಿಚಾರಣೆ ಇಲ್ಲದ ಕಾರಣ, ಅವರ ಕಾರ್ಯವನ್ನು ನಿಕಟವಾಗಿ ಗಮನಿಸಿ, ಪ್ರಕ್ರಿಯೆಯನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸುವಂತೆ ನೋಡಿಕೊಳ್ಳುವುದು ಸರ್ಕಾರದಿಂದ ಹಾಗೂ ಆರೋಗ್ಯ ಇಲಾಖೆಯಿಂದ ಅತ್ಯಂತ ಅಗತ್ಯ. ಸಾವಿಗೀಡಾದವರ ಹೆಸರಿನಲ್ಲಿ ಬಿಲ್ ತಯಾರಿಸುವುದು, ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಕಲಿ ದಾಖಲೆ ಸೃಷ್ಟಿಸುವುದು- ಇವೆಲ್ಲವು ವೈದ್ಯಕೀಯ ಕ್ಷೇತ್ರದ ಗೌರವಕ್ಕೆ ಧಕ್ಕೆ ತರುತ್ತದೆ, ಜನರ ನಂಬಿಕೆಯನ್ನು ನಾಶಮಾಡುತ್ತದೆ.

ಈ ಘಟನೆಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯನ್ನು ತಕ್ಷಣ ಅಮಾನತು ಮಾಡಿ, ಜನರ ಹಣವನ್ನು ದೋಚಿದವರನ್ನು ಕಠಿಣವಾಗಿ ಶಿಕ್ಷಿಸಬೇಕು ಹಾಗೂ ಇಂತಹ ಘಟನೆಗಳು ರಾಜ್ಯದ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಘಟಿಸದಂತೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನಿತರ ಲೋಪದೋಷಗಳ ಬಗ್ಗೆ

ನಿಗಾ ವಹಿಸಲು ಗುಪ್ತ ವಿಚಕ್ಷಣ ದಳವನ್ನು ರಚಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

ರಾಜ್ಯದಲ್ಲಿ ಡಯಾಲಿಸಿಸ್ ಸೇವೆಯನ್ನು 04 ಕಂದಾಯ ವಿಭಾಗಗಳಾದ ಕಲಬುರ್ಗಿ ವಿಭಾಗದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ವತಿಯಿಂದ ಮತ್ತು ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ವಿಭಾಗದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಅನುಷ್ಠಾನಗೊಳಿಸಿ ಸೇವೆಯನ್ನು ಒದಗಿಸಲಾಗುತ್ತಿದೆ.

ಫೆಬ್ರುವರಿ 2025 ರ ಮಾಹೆಯಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಸಾರ್ವಜನಿಕ ಆಸ್ಪತ್ರೆಗೆ ಸಂಬಂಧಿಸಿದ ಡಯಾಲಿಸಿಸ್ ಸೇವೆಗಳ ಬಿಲ್ಲುಗಳನ್ನು ಸೇವಾದಾರರು ಸಲ್ಲಿಸಿದ್ದು, ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರ್ಥಿಕ ವಿಭಾಗವು ಅಪೆಂಡಿಕ್ಸ್-ಟಿ ಯೊಂದಿಗೆ ಪರಿಶೀಲಿಸಿ ದೃಢೀಕರಿಸುವ ಸಂಧರ್ಭದಲ್ಲಿ ಫೆಬ್ರುವರಿ 15, 2025 ರಂದು ಡಯಾಲಿಸಿಸ್ ಸೇವೆ ಪಡೆಯುತ್ತಿದ್ದ ಶ್ರೀಮತಿ. ಸೀತಾಬಾಯಿ ರಾಠೋಡ್ ನಿಧನ ಹೊಂದಿರುವುದು ಗಮನಕ್ಕೆ ಬಂದಿರುತ್ತದೆ. ಶ್ರೀಮತಿ. ಸೀತಾಬಾಯಿ ರಾಠೋಡ್ ರವರು ಫೆಬ್ರುವರಿ -15 ಕ್ಕೂ ಮುನ್ನ ನಾಲ್ಕು ಬಾರಿ ಡಯಾಲಿಸಿಸ್ ಸೇವೆಗಳನ್ನು ಪಡೆದಿರುತ್ತಾರೆ. ಆದರೆ ಫೆಬ್ರುವರಿ -15 ರ ನಂತರ ಆಸ್ಪತ್ರೆಯ ನೋಂದಣಿ ಪುಸ್ತಕದಲ್ಲಿ ಇನ್ನು ಹೆಚ್ಚುವರಿಯಾಗಿ ಡಯಾಲಿಸಿಸ್ ಸೈಕಲ್‌ಗಳು ದಾಖಲಾಗಿರುವುದು ಕಂಡುಬಂದಿರುತ್ತದೆ. ನಂತರ ಮಾರ್ಚ್ ತಿಂಗಳಲ್ಲಿ ಈ ರೋಗಿಗೆ ಸಂಬಂಧಿಸಿದಂತೆ ಯಾವುದೇ ಬಿಲ್ಲುಗಳನ್ನು ಸಲ್ಲಿಕೆಯಾಗಿರುವುದಿಲ್ಲ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಸೇವಾದಾರರು ಮತ್ತು ಆಡಳಿತ ವೈದ್ಯಾಧಿಕಾರಿಗಳಿಂದ ಪ್ರಾಥಮಿಕ ತನಿಖೆಯನ್ನು ನಡೆಸಲಾಗಿರುತ್ತದೆ. ಸೇವಾದಾರರು ತಮ್ಮ ತನಿಖಾ ವರದಿಯಲ್ಲಿ ತಮ್ಮ ಎರಡು ಸಿಬ್ಬಂದಿಗಳ ನಿರ್ಲಕ್ಷತೆಯಿಂದ ಸದರಿ ಪ್ರಕರಣದಲ್ಲಿ ಕರ್ತವ್ಯ ಲೋಪ ಕಂಡುಬಂದಿರುವುದು ಹಾಗೂ ಸದರಿ ಸಿಬ್ಬಂದಿಗಳನ್ನು ಜನವರಿ- 2025 ಮತ್ತು ಮಾರ್ಚ್-2025 ರ ಮಾಹೆಯಲ್ಲಿ ಕರ್ತವ್ಯದಿಂದ ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮುದ್ದೇ ಬಿಹಾಳ ರವರು ತಮ್ಮ ಪ್ರಾಥಮಿಕ ತನಿಖಾ ವರದಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ರೋಗಿಯ ಬಯೋ ಮೆಟ್ರಿಕ್ ದಾಖಲೆಯನ್ನು ಸೇವಾದಾರರ ಸಿಬ್ಬಂದಿಗಳು ನಕಲು ಸೃಷ್ಟಿ ಮಾಡಿ ದಾಖಲಿಸಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ಸೇವಾದಾರರು HMIS ತಂತ್ರಾಂಶದ ಮಾದರಿಯಲ್ಲಿ ದಾಖಲೆಗಳು, ಉಪಭೋಗ್ಯ ವಸ್ತುಗಳು, ಡಯಾಲಿಸಿಸ್‌ಗಳ ಸಂಖ್ಯೆ, ಇತ್ಯಾದಿಗಳ ದಾಖಲಾತಿಗಳನ್ನು ನಿರ್ವಹಿಸಲು ನಿರ್ವಹಣೆ ಮಾಡಲಾಗುತ್ತಿದ್ದು, ಸದರಿಯನ್ನು ತಮ್ಮ ತಂಡ ಪ್ರತಿ ತಿಂಗಳ 10, 20 ಮತ್ತು 30 ನೇ ತಾರೀಖಿನಂದು ಆಂತರಿಕವಾಗಿ

ಪರಿಶೀಲಿಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಪ್ರತಿ ಕೇಂದ್ರದ ವರದಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಎರಡು ಬಾರಿ ಆಂತರಿಕ ಲೆಕ್ಕ ಪರಿಶೋಧನಾ ತಂಡದಿಂದ ಲೆಕ್ಕ ಪರಿಶೋಧನೆಯನ್ನು ನಡೆಸುವ ವ್ಯವಸ್ಥೆಯಿದ್ದು, ಹಾಗೂ ಇದನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ವಾರ್ಷಿಕ ಎರಡು ಬಾರಿ ಮೂರನೇ ಪಕ್ಷದಾರರಿಂದ (Third party) ಲೆಕ್ಕ ಪರಿಶೋಧನೆಯನ್ನು ನಡೆಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಪ್ರಕ್ರಿಯೆಯಿಂದ ಸದರಿ ಪ್ರಕರಣದಲ್ಲಿ ನ್ಯೂನತೆಯನ್ನು ಕಂಡುಹಿಡಿಯಲಾಗಿದ್ದು, ತಪ್ಪಿತಸ್ಥ ಇಬ್ಬರು ಸಿಬ್ಬಂದಿಗಳನ್ನು ಜನವರಿ-2025 ಮತ್ತು ಮಾರ್ಚ್-2025 ರಲ್ಲಿ ಕರ್ತವ್ಯದಿಂದ ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಸೇವಾದಾರರು ತಾವು ನೀಡಲಾದ ಡಯಾಲಿಸಿಸ್ ಸೇವೆಗೆ ಒಳಪಡಿಸುವ ಎಲ್ಲಾ ರೋಗಿಗಳ ಬಯೋ ಮೆಟ್ರಿಕ್ ದಾಖಲೆಗಳನ್ನು (Not AADHAR enabled) ನಮೂದಿಸುವ ವ್ಯವಸ್ಥೆಯನ್ನು ಅಳವಡಿಸಿದ್ದು, ಸಂಬಂಧಪಟ್ಟ ಸೇವಾದಾರರಿಗೆ ಈ ಹಿಂದೆ ಸಲ್ಲಿಸಲಾದ ಬಿಲ್ಲುಗಳನ್ನು ಪರಿಶೀಲಿಸಿ ಈ ರೀತಿಯ ನಕಲಿ ಬಿಲ್ಲುಗಳು ಸೃಷ್ಟಿಯಾಗದೇ ಇರುವುದನ್ನು ಪರಿಶೀಲಿಸಿ ಒಂದು ವಾರದೊಳಗೆ ಖಾತ್ರಿಪಡಿಸಲು ಸೂಚಿಸಲಾಗಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರ್ಥಿಕ ವಿಭಾಗವು ಸೇವಾದಾರರು ಸಲ್ಲಿಸುವ ಬಿಲ್ಲುಗಳನ್ನು ಮರುಪರಿಶೀಲನೆ ಹಾಗೂ ಆಂತರಿಕ ಲೆಕ್ಕ ಪರಿಶೋಧನೆ ನಡೆಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಹಾಗೂ ಸೇವಾದಾರರು ಈ ಹಿಂದೆ ಸಲ್ಲಿಸಲಾದ ಬಿಲ್ಲುಗಳನ್ನು ಹಾಗೂ ಸೇವಾದಾರರು ನಡೆಸಲಾದ ಆಂತರಿಕ ಲೆಕ್ಕ ಪರಿಶೋಧನಾ ವರದಿಯನ್ನು ತುಲನೆ ಮಾಡಿ ವರದಿಯನ್ನು ಸಲ್ಲಿಸಲು ಹಾಗೂ ಬಿಲ್ಲುಗಳನ್ನು ಪಾವತಿಸುವ ಮುನ್ನ ಪರಿಶೀಲಿಸಲು ಕ್ರಮವಹಿಸಲಾಗುವುದು.

ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮುದ್ದೇ ಬಿಹಾಳ ರವರು ನೀಡಲಾದ ಹೇಳಿಕೆಯನ್ವಯ ಸೇವಾದಾರರು ರೋಗಿಗಳಿಗೆ ನೀಡಲಾದ ಡಯಾಲಿಸಿಸ್ ಸೇವೆಗಳ ವಿವರಗಳನ್ನು ದಾಖಲಾತಿ ಪುಸ್ತಕದಲ್ಲಿ ದಾಖಲಿಸುತ್ತಿದ್ದು, ಸದರಿಯನ್ನು ಅಂದಿನ ಕರ್ತವ್ಯನಿರತ ವೈದ್ಯಾಧಿಕಾರಿಗಳಿಂದ ದೃಢೀಕರಿಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಸೇವಾದಾರರ ಸಿಬ್ಬಂದಿಗಳು ಸದರಿ ಪ್ರಕರಣದಲ್ಲಿ ಅಂದಿನ ಕರ್ತವ್ಯನಿರತ ವೈದ್ಯಾಧಿಕಾರಿಗಳನ್ನು ದಿಕ್ಕು ತಪ್ಪಿಸಿ ದಾಖಲೆ ಪುಸ್ತಕದಲ್ಲಿ ಸಹಿಯನ್ನು ಪಡೆದಿರುವ ಬಗ್ಗೆ ತಿಳಿಸಲಾಗಿದ್ದು, ಸಂಬಂಧಪಟ್ಟ ಕರ್ತವ್ಯನಿರತ ವೈದ್ಯಾಧಿಕಾರಿಗಳು ಮತ್ತು ಆಡಳಿತ ವೈದ್ಯಾಧಿಕಾರಿಗಳಿಗೆ ಆಯುಕ್ತರು, ಆ.ಕು.ಕ ಸೇವೆಗಳು ರವರ ಮುಖೇನ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗುವುದು. ಮುಂದುವರೆಯುತ್ತಾ ಆಡಳಿತ ವೈದ್ಯಾಧಿಕಾರಿಗಳಿಂದ ಸೇವಾದಾರರ ಸಿಬ್ಬಂದಿಗಳ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲು ನಿರ್ದೇಶಿಸಲಾಗಿದೆ.

ಇಲಾಖಾ ವತಿಯಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಾಗೂ ಈ ರೀತಿಯಾದ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಸುತ್ತೋಲೆಯನ್ನು ಹೊರಡಿಸಲಾಗುವುದು. ಸದರಿ

ಸುತ್ತೋಲೆಯಲ್ಲಿ ಸರ್ಕಾರಿ ವೈದ್ಯರ ಡಯಾಲಿಸಿಸ್ ಸೇವೆಗೆ ಸಂಬಂಧಿಸಿದಂತೆ ಜವಾಬ್ದಾರಿಗಳು, ಉಪಭೋಗ್ಯ ವಸ್ತುಗಳ ದಾಸ್ತಾನುವಿನ ಪರಿಶೀಲನೆ ಹಾಗೂ ಸದರಿ ದಾಸ್ತಾನಿನ ವಿವರಗಳನ್ನು ಸೇವಾದಾರರ HMIS ಮಾದರಿ ತಂತ್ರಾಂಶದಲ್ಲಿ ಪರಿಶೀಲಿಸುವ ಪ್ರಕ್ರಿಯೆಯನ್ನು ನಡೆಸಲು ತಿಳಿಸಲಾಗುವುದು.

ಈ ರೀತಿಯ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಸೇವೆಗಳು ಮತ್ತು ಪಾವತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಸರ್ಕಾರವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಜಾರಿಯಲ್ಲಿರುವ ಪಾವತಿ ಮಾದರಿಯನ್ನು ಕಲಬುರಗಿ ವಿಭಾಗದಲ್ಲಿ ಅಳವಡಿಸಿಕೊಂಡಿರುತ್ತದೆ. ಈ ಮಾದರಿಯಿಂದ ನೈಜ ಪ್ರಕರಣಗಳಿಗೆ ಮಾತ್ರ ಪಾವತಿ ಪ್ರಕ್ರಿಯೆಯನ್ನು ನಿರ್ವಹಿಸಲು ಸಾಧ್ಯವಾಗುವ ಹಿನ್ನೆಲೆಯಲ್ಲಿ ಈ ಮಾದರಿಯನ್ನು ಉಳಿದ ಮೂರು ಕಂದಾಯ ವಿಭಾಗಗಳ ವ್ಯಾಪ್ತಿಯಲ್ಲಿಯೂ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.

ಕಲಬುರಗಿ ವಿಭಾಗದಲ್ಲಿ ಡಯಾಲಿಸಿಸ್ ಸೇವೆಗಳನ್ನು ಪಾರದರ್ಶಕತೆಯಿಂದ ಹಾಗೂ ಯಶಸ್ವಿಯಾಗಿ ಉತ್ತಮ ಗುಣಮಟ್ಟದ ಸೇವೆಗಳನ್ನು ಒದಗಿಸಲಾಗುತ್ತಿದ್ದು, ಸದರಿ ಮಾದರಿಯನ್ನು ಮುಂಬರುವ ದಿನಗಳಲ್ಲಿ ಬೆಂಗಳೂರು, ಬೆಳಗಾವಿ ಮತ್ತು ಮೈಸೂರು ವಿಭಾಗಕ್ಕೆ ವಿಸ್ತರಿಸಲು ಕ್ರಮ ವಹಿಸಲಾಗುವುದು. ಮುಂದುವರೆಯುತ್ತಾ ಮುಖ ಚಹರೆ (Face recognition) ಆಧಾರಿತ ಬಯೋ ಮೆಟ್ರಿಕ್ ದೃಢೀಕರಣವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಲಾಗುವುದು.

ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಗಳನ್ನು ಗುಣಾತ್ಮಕ ಮತ್ತು ಪರಿಣಾಮಕಾರಿ ಪರಿಶೀಲನೆ ನಡೆಸುವ ನಿಟ್ಟಿನಲ್ಲಿ ಯೋಜನಾ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗುವುದು.

ಆಕುಕ 91 ಎಸ್.ಟಿ.ಕ್ಯೂ 2025

(ದಿನೇಶ್ ಗುಂಡೂರಾವ್)
ಆರೋಗ್ಯಮತ್ತುಕುಟುಂಬಕಲ್ಯಾಣ ಸಚಿವರು